International Journal of Kannada Research 2020; 6(4): 89-90

International Journal of Kannada Research
www.kannadajournal.com

**ISSN: 2454–5813**
IJKR 2020; 6(4): 89-90
© 2020 IJKR
www.kannadajournal.com
Received: 04-09-2020
Accepted: 12-10-2020

**ಝಮೀರ್ ಅಹಮದ್**
ಕನ್ನಡ ಉಪನ್ಯಾಸಕರು, ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಚಿಕ್ಕ ಅಳುವಾರ, ಕೊಡಗು, ಏಚಿಡಿಟಚಿಣಚಿಞಚಿ, ಖಟಿಜಚಿ

**Corresponding Author:**
**ಝಮೀರ್ ಅಹಮದ್**
ಕನ್ನಡ ಉಪನ್ಯಾಸಕರು, ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಚಿಕ್ಕ ಅಳುವಾರ, ಕೊಡಗು, ಏಚಿಡಿಟಚಿಣಚಿಞಚಿ, ಖಟಿಜಚಿ

# ಕನ್ನಡ ನಾಡಿನ ಅಸ್ಮಿತೆ

**ಝಮೀರ್ ಅಹಮದ್**

ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಅಖಂಡ ಕರ್ನಾಟಕದಲ್ಲಿ ಮಹಾಕವಿಗಳನ್ನೂ ಶಿಲ್ಪಿಗಳನ್ನೂ ರಾಜಾಧಿರಾಜರನ್ನೂ ವೀರಾಧಿವೀರರನ್ನೂ ರಸಋಷಿ ದಾರ್ಶನಿಕರನ್ನೂ ಹಡೆದಿರುವ ಕನ್ನಡ ಭಾಷೆಯು ಪರಕೀಯ ಭಾಷೆಗಳ ಜೊತೆಗಷ್ಟೇ ಅಲ್ಲದೇ ನಮ್ಮ ದೇಶದ ಇನ್ನಿತರೆ ರಾಜ್ಯಭಾಷೆಗಳ ಜೊತೆ ಜೊತೆಗೆ ಸುದೀರ್ಘ ಕಾಲದಿಂದಲೂ ಸ್ಪರ್ಧೆಗಳನ್ನು ನಡೆಸಿಕೊಂಡು ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯಭಾಷೆಯಾಗಿ, ರಾಜ್ಯ ಭಾಷೆಯಾಗಿ, ಆಡಳಿತ ಭಾಷೆಯಾಗಿ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ.

ಕನ್ನಡ ನಾಡಿನ ರಾಜಧಾನಿಯಲ್ಲಿ ಕನ್ನಡವೇ ಅಗ್ರಗಣ್ಯ ಮತ್ತು ಅಗ್ರಮಾನ್ಯ. ಆಡಳಿತ ಭಾಷೆಯಿಂದ ಹಿಡಿದು ಶಿಕ್ಷಣ ಮಾಧ್ಯಮದವರೆಗೂ ಸರ್ವಕ್ಷೇತ್ರಗಳಲ್ಲಿಯೂ ಸರ್ವ ಸ್ಥಳಗಳಲ್ಲಿಯೂ ಕನ್ನಡ ಭಾಷೆಗೆ ಅಗ್ರಸ್ಥಾನವಿರಬೇಕು ಎಂದು ವಿಶ್ವಮಾನವ ಸಂದೇಶದ ಮನುಜಮತ ವಿಶ್ವಪಥದಲ್ಲಿ ಮಾತೃ ಭಾಷೆ ಬಗ್ಗೆ ರಾಷ್ಟ್ರಕವಿ ಕುವೆಂಪು ಅವರು ಸಾರಿರುವ ಚಿಂತನೆ ಸಾರ್ವಕಾಲೀಕವಾದುದು ಎಂಬುದನ್ನು ಪ್ರಸ್ತುತ ಸಂದರ್ಭದಲ್ಲಿ ಕನ್ನಡ ನಾಡಿನ ರಾಜಕೀಯ ನಾಯಕರು ಮರೆತಂದಿದೆ.

ಸ್ವತಂತ್ರಪೂರ್ವ ಕಾಲಘಟ್ಟದಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರಾದಿಯಾಗಿ ಕನ್ನಡ ನಾಡಿನ ಅಪಾರ ಕನ್ನಡದ ಮಹಾನ್ ಚೇತನರು, ಅಖಂಡ ಕರ್ನಾಟಕದ ಪರಿಕಲ್ಪನೆಯ ಸಾಕಾರಗೊಳಿಸುವುದಕ್ಕಾಗಿ ಅವಿರತ ಪರಿಶ್ರಮಿಸಿದರು. ಅದರ ಜೊತೆಗೆ ಇಂಗ್ಲಿಷ್ ಭಾಷೆಯ ಬಲತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣಗೊಳಿಸಿ, ಇಂಗ್ಲಿಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸುವುದಕ್ಕಾಗಿ ಹೋರಾಟ ಮಾಡಿಕೊಂಡು ಬಂದರು.

ಶ್ರೀಕುವೆಂಪು ಅವರು ಪ್ರಾದೇಶಿಕ ಭಾಷೆಗೆ ಅಗ್ರಸ್ಥಾನ ಕೊಡಬೇಕು, ಅದೇ ಶಿಕ್ಷಣ ಮಾಧ್ಯಮವಾಗಬೇಕು, ಅದೇ ರಾಜ್ಯಭಾಷೆಯಾಗಬೇಕು ಎಂಬ ಹಕ್ಕೊತ್ತಾಯ ಮಾಡಿದ್ದರೆ, ಇಂದಿನ ರಾಜಕಾರಣಿಗಳ ತಮ್ಮ ಕ್ಷೇತ್ರದ ಮತವನ್ನು ಭದ್ರಪಡಿಸಿಕೊಳ್ಳುವ ಕಡೆಗೆ ಹೆಚ್ಚಿನ ಇಚ್ಛಾ ಶಕ್ತಿ ಪ್ರದರ್ಶನ ಮಾಡುತ್ತಿದ್ದಾರೆ. ಕೆಲ ಜನಪ್ರತಿನಿಧಿಗಳಂತು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕನ್ನಡ ನಾಡಿನ ಸರ್ವಸ್ವವನ್ನು ಅನುಭವಿಸಿ ಕನ್ನಡನಾಡಿನಲ್ಲಿ ಕನ್ನಡೇತರ ಭಾಷೆಯ ಅಸ್ತಿತ್ವಕ್ಕೆ ಹುನ್ನಾರಕ್ಕಾಗಿ ಹೋರಾಟ ಮಾಡುತ್ತಿರುವುದು ಅವರ ಮನಸ್ಥಿತಿಯನ್ನು ಎತ್ತಿ ಹಿಡಿಯುತ್ತಿದೆ.

ನವಂಬರ್ ೧೮ 1995 ರಂದು ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆಯಾಗಿ, ಶಾಸನಬದ್ಧ ಅಧಿಕಾರಗಳನ್ನು ಹೊಂದಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ರಚನೆಯಾಯಿತು. ಕರ್ನಾಟಕದಲ್ಲಿ ಅಧಿಕೃತ ಆಡಳಿತ ಭಾಷೆಯಾಗಿ ಕನ್ನಡ ಅಳವಡಿಕೆ ಮತ್ತು ಬಳಕೆಯನ್ನು ಇದು ಪರಿಶೀಲಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಲು ಪ್ರಾಧಿಕಾರವು ಶಿಫಾರಸ್ಸು ಮಾಡುತ್ತದೆ. ಈ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಿ ಪ್ರಾಧಿಕಾರಕ್ಕೆ ಸ್ವಾಯತ್ತತೆ ಮತ್ತು ಶಾಸನಬದ್ಧ ಸ್ಥಾನಮಾನಗಳನ್ನು ನೀಡಲಾಗಿದೆ.

ಸರ್ಕಾರವು 'ಕರ್ನಾಟಕ ರಾಜ್ಯಭಾಷಾ ಅಧಿನಿಯಮ 1963' ಎಂಬ ಒಂದು ಕಾಯಿದೆಯನ್ನು ಜಾರಿಗೊಳಿಸಿ ಕರ್ನಾಟಕ ರಾಜ್ಯದಲ್ಲಿ ಕನ್ನಡವು ರಾಜ್ಯದ ಅಧಿಕೃತ ಆಡಳಿತ ಭಾಷೆಯೆಂದು ಘೋಷಿಸಿತು. ರಾಜ್ಯ ಭಾಷೆಯಾಗಿರುವ ಕನ್ನಡ ಭಾಷೆಯ ಪ್ರೋತ್ಸಾಹ ಹಾಗೂ ಬೆಳವಣಿಗೆಯ ಕಾರ್ಯಚಟುವಟಿಕೆಗಳನ್ನು ನಡೆಸುವ ಕಾರ್ಯವ್ಯಾಪ್ತಿ ಹೊಂದಿರುವ ಕನ್ನಡ ಪ್ರಾಧಿಕಾರಕ್ಕೆ ಸರ್ಕಾರವು ಕಡಿಮೆ ಅನುದಾನವನ್ನು ಮೀಸಲಿಟ್ಟು, ಮರಾಠಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿನ ಹಣವನ್ನು ಕೊಡುತ್ತಿರುವುದು ಮುಂದಿನ ದಿನಗಳಲ್ಲಿ ತಮಿಳರ ಪ್ರಾಧಿಕಾರ, ತೆಲುಗಿನ ಪ್ರಾಧಿಕಾರ,

ಮಲೆಯಾಳಿ ಪ್ರಾಧಿಕಾರ, ತುಳು ಪ್ರಾಧಿಕಾರ, ಕೊಡವ ಪ್ರಾಧಿಕಾರ, ಕೊಂಕಣಿ ಪ್ರಾಧಿಕಾರ ಹೀಗೆ ಇನ್ನಿತರೆ ಭಾಷೆಗಳ ಪ್ರಾಧಿಕಾರಕ್ಕೂ ಹೋರಾಟ ನಡೆಸಲು ಅನುವು ಮಾಡಿಕೊಟ್ಟಂತ್ತಾಗುತ್ತದೆ.

ಮರಾಠ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುವ ಸರ್ಕಾರದ ಕ್ರಮದಿಂದ ಇತ್ತೀಚಿನಗಳಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಕನ್ನಡಿಗರ ಪಾಲಿಗೆ ಬೇಸರದ ಜೊತೆಜೊತೆಗೆ ನಿರಾಶಾದಾಯಕವಾಗಿರುವಂತಹದ್ದು. ಅದರಲ್ಲೂ ನವೆಂಬರ್ ತಿಂಗಳು ಬಂತೆಂದರೆ ರಾಜ್ಯದೆಲ್ಲಡೆ 'ಕನ್ನಡ ಹಬ್ಬ'ದ ವಾತಾವರಣ ಮನೆ ಮಾಡಿರುತ್ತದೆ. ಒಂದು ಭಾವನಾತ್ಮಕ ಸಂಬಂಧವನ್ನು ಹೊಂದಿರುವ ನವೆಂಬರ್ ತಿಂಗಳಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಅವರ ಬೆಂಬಲಿಗರು ಮರಾಠಾ ಅಭಿವೃದ್ಧಿ ನಿಗಮ ಸ್ಥಾಪಿಸಿದ್ದಕ್ಕೆ ಅಭಿನಂದನೆ ಸಲ್ಲಿಸಿ ಮರಾಠಿಯಲ್ಲಿ ನಾಮಫಲಕ ಅಳವಡಿಸುವುದು, ಈ ನಾಮ ಫಲಕಕ್ಕೆ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಮಸಿ ಬಳಿಯುವ ಮೂಲಕ ಸರ್ಕಾರದ ಈ ನಿರ್ಧಾರಕ್ಕೆ ವಿರೋಧಿಸುವುದು, ಇಂತಹ ಘರ್ಷಣೆಗಳಿಗೆ ಎಡೆ ಮಾಡಿ ಕೊಡುತ್ತಾ ಸರ್ವ ಜನಾಂಗದ ಶಾಂತಿಯ ತೋಟವಾಗಿರುವ ಕನ್ನಡ ನಾಡಿನ ಶಾಂತ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಿರುವುದು ಇಂದಿನ ರಾಜಕಾರಣದ ವ್ಯವಸ್ಥೆಯ ಮೇಲೆ ಬೇಸರ ಮೂಡಿಸದೆ ಇರದು.

ಯಾವುದೇ ಅಭಿವೃದ್ಧಿ ನಿಗಮಗಳಾಗಿರಲಿ ಅವುಗಳು ಸಾಮೂಹಿಕ ಚಿಂತನೆಯಿಂದ ಕೂಡಿರಬೇಕು. ಸಮಾಜದ ಕೆಳಸ್ತರದಲ್ಲಿರುವ ಸಮುದಾಯದಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಅವುಗಳನ್ನು ಮೇಲೆತ್ತಲು ಆದ್ಯತೆ ನೀಡಬೇಕು. ಆದರೆ ಈಗಾಗಲೇ ರಚನೆಯಾಗಿರುವ ಪ್ರಾಧಿಕಾರಗಳು, ನಿಗಮ ಮಂಡಳಿಗಳಿಂದ ಅಂತಹ ನಿರೀಕ್ಷಿತ ಸಾಧನೆಯಾಗಿದೆಯೇ? ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡಿರುವಾಗ ರಾಜ್ಯ ಸರ್ಕಾರ ಮರಾಠ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸುವುದಾಗಿ ಘೋಷಿಸಿರುವುದು ಸಮಯೋಚಿತ ನಿರ್ಧಾರವಲ್ಲ. ಈ ನಿರ್ಧಾರಕ್ಕೆ ರಾಜ್ಯದ ಎಲ್ಲೆಡೆ ವಿರೋಧ ವ್ಯಕ್ತವಾಗುತ್ತಿದೆ. ಇನ್ನು ಮಹಾರಾಷ್ಟ್ರದ ಗಡಿ ಜಿಲ್ಲೆಯಲ್ಲಿ ಕನ್ನಡಪರ ಸಂಘಟನೆಗಳು ಇದನ್ನು ತೀವ್ರವಾಗಿ ಖಂಡಿಸಿದೆ. ಆದರೆ, ಇಲ್ಲಿನ ಕೆಲ ತಿಳಿಗೇಡಿ ನಾಯಕರು ಈ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಇದಕ್ಕಾಗಿ ನಗರದ ಹಲವೆಡೆ ಸರ್ಕಾರವನ್ನು ಅಭಿನಂದಿಸಿ ಫಲಕಗಳನ್ನು ಹಾಕಲಾಗುತ್ತಿದೆ. ಈ ಫಲಕಗಳು ಇದೀಗ ಕನ್ನಡ ಸಂಘಟನೆಗಳ ಕೆಂಗಣ್ಣಿಗೆ ಗುರಿಯಾಗಿವೆ. ಸರ್ಕಾರವು ಈ ಕೂಡಲೇ ಮರಾಠಾ ಅಭಿವೃದ್ಧಿ ನಿಗಮ ರದ್ದು ಪಡಿಸಿ, ತಮ್ಮ ನಿರ್ಧಾರದಿಂದ ಹಿಂದೆ ಸರಿಯುವಂತೆ ಎಲ್ಲೆಡೆ ಕನ್ನಡಿಗರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ.

ಕನ್ನಡಿಗರು ಹಾಗೆ ನೋಡಿದರೆ ಯಾವ ಭಾಷೆಯ ದ್ವೇಷಿಗಳೂ ಅಲ್ಲ. ಆದರೆ ಶ್ರೀಕುಂವೆಪು ಮನುಜ ಮತ ವಿಶ್ವ ಪಥದಲ್ಲಿ ಹೇಳಿರುವ 'ಎಲ್ಲರೂ ಎಲ್ಲವನ್ನೂ ಕಲಿಯಬೇಕು ಅನ್ನುವ ಬಲವಂತ ಬೇಡ'. ಇನ್ನು ಮುಂದೆ ಹೋಗಿ 'ಹಿಂದಿಯನ್ನಾಗಲಿ, ಇಂಗ್ಲೀಷನ್ನಾಗಲಿ ಎಲ್ಲರೂ ಕಲಿಯಬೇಕು ಅನ್ನುವಂಥ ಅವಿವೇಕ ಮತ್ತೊಂದಿಲ್ಲ.' ಎಂಬ ಮಾತು ಇಂದಿನ ವ್ಯವಸ್ಥೆಗೆ ಮನನ ಮಾಡಿಕೊಡುವ ಅಗತ್ಯತೆ ಇದೆ.

ಕಾದಂಬರಿ ಸಾರ್ವಭೌಮ ಅ. ನ. ಕೃಷ್ಣರಾಯರು ಅವರು "ಕರ್ನಾಟಕದ ಹಿತವನ್ನು ವಿರೋಧಿಸುವ ವ್ಯಕ್ತಿ ಎಷ್ಟೇ ದೊಡ್ಡ ರಾಷ್ಟ್ರಭಕ್ತನಾದರೂ ಅವನನ್ನು ಕನ್ನಡಿಗರು ನಿರಾಕರಿಸಬೇಕು" ಎಂಬ ಮಾತುಗಳು ಪ್ರಸ್ತುತ ಸಂದರ್ಭಕ್ಕೆ ಪೂರಕವಾಗಿದೆ. ರಾಷ್ಟ್ರಪ್ರೇಮದ ಹೆಸರಿನಲ್ಲಿ ಎಲ್ಲದಕ್ಕೂ ರಾಜಕಾರಣವನ್ನು ತಳುಕು ಹಾಕಿ ನೋಡುವ ಪ್ರಯತ್ನಗಳು ಹಿಂದಿನಿಂದಲೂ ನಡೆದುಕೊಂಡು ಬಂದಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ನಾಡು–ನುಡಿಯ ವಿಚಾರದಲ್ಲೂ ಪರಿಣಾಮಕಾರಿಯಾಗಿ ನಡೆಯುತ್ತಿರುವ ಬೆಳವಣಿಗೆಗಳು ಕನ್ನಡ ನಾಡಿನ ಅಸ್ಮಿತೆಯನ್ನು ಪ್ರಶ್ನಿಸುವ ಹಂತಕ್ಕೆ ತಲುಪುತ್ತಿವೆ.